# ಪಿಎನ್‌ಜಿ: ಎನ್‌ಐಟಿಕೆ– ಜಿಜಿಎಲ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಸುರತ್ಕಲ್: ಇಲ್ಲಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯು ಕೊಳವೆಗಳ ಮೂಲಕ ನೈಸರ್ಗಿಕ ಅನಿಲ ಪೂರೈಕೆ (ಪಿಎನ್‌ಜಿ) ಸಂಬಂಧ ಗೇಲ್ ಗ್ಯಾಸ್ ಲಿಮಿಟೆಡ್ (ಜಿಜಿಎಲ್) ಸಂಸ್ಥೆ ಜೊತೆ ಒಪ್ಪಂದಕ್ಕೆ ಸಹಿ ಹಾಕಿದೆ.

ಗೇಲ್ ಗ್ಯಾಸ್ ಲಿಮಿಟೆಡ್ ಸಂಸ್ಥೆಯು ಎನ್‌ಐಟಿಕೆ ಪ್ರಾಂಗಣದ ಎಲ್ಲಾ ಬೋಧಕ ಮತ್ತು ಸಿಬ್ಬಂದಿ ವಸತಿಗೃಹಗಳಿಗೆ ಕೊಳವೆ ಮೂಲಕ ನೈಸರ್ಗಿಕ ಅನಿಲ ಪೂರೈಸಲಿದೆ. ಅಗ್ಗದ ದರದ ಈ ಇಂಧನವು ಬಳಸಲು ಸುಲಭ ಮತ್ತು ಪರಿಸರ ಸ್ನೇಹಿಯೂ ಆಗಿದೆ. ಪಿಎನ್‌ಜಿ ಬಳಕೆಯಿಂದ ಎನ್‌ಐಟಿಕೆ ಪ್ರಾಂಗಣವು ಮತ್ತಷ್ಟು ಸ್ಮಾರ್ಟ್ ಆಗಲಿದೆ.

ಗೇಲ್ ಮಂಗಳೂರು ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಜಿಎಂಪಿಎಲ್) ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುಧೀರ್ ಕುಮಾರ್ ದೀಕ್ಷಿತ್, ಜಿ.ಎಂ (ಸಿಜಿಡಿ)ಯೋಜನೆ ಮತ್ತು ಮುಖ್ಯಸ್ಥ ಸಾಯಿಶಂಕರ್ ಬಿ. ಹಾಗೂ ಎನ್‌ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಅವರು ಒಪ್ಪಂದಕ್ಕೆ ಬುಧವಾರ ಸಹಿ ಹಾಕಿದರು.




ಎನ್‌ಐಟಿಕೆ ಪ್ರಾಂಗಣದ ವಸತಿಗೃಹಗಳಿಗೆ ಕೊಳವೆಗಳ ಮೂಲಕ ನೈಸರ್ಗಿಕ ಅನಿಲ ಪೂರೈಸುವ ಕುರಿತು ಜಿಎಂಪಿಎಲ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುಧೀರ್ ಕುಮಾರ್ ದೀಕ್ಷಿತ್, ಜಿ.ಎಂ (ಸಿಜಿಡಿ) ಯೋಜನೆ ಮತ್ತು ಮುಖ್ಯಸ್ಥ ಸಾಯಿಶಂಕರ್ ಬಿ., ಎನ್‌ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಅವರು ಒಪ್ಪಂದಕ್ಕೆ ಸಹಿ ಹಾಕಿದರು

ಎನ್‌ಐಟಿಕೆಯ ವಿವಿಧ ವಿಭಾಗಗಳ ಡೀನ್‌ಗಳಾದ ಪ್ರೊ.ಕೆ.ವಿ. ಗಂಗಾಧರನ್; ಪ್ರೊ. ಉದಯ ಭಟ್ ಕೆ., ಪ್ರೊ.ದ್ವಾರಕೇಶ್, ಪ್ರೊ.ಶ್ರೀಕಾಂತ ಎಸ್, ರಾವ್, ಜಂಟಿ ಕುಲಸಚಿವ ರಾಮ್ ಮೋಹನ್ ವೈ ಹಾಗೂ ಗೇಲ್ ಗ್ಯಾಸ್ ಸಂಸ್ಥೆಯ ಮಾರುಕಟ್ಟೆ ವಿಭಾಗದ ಹಿರಿಯ ವ್ಯವಸ್ಥಾಪಕ ಧರ್ಮೇಂದ್ರ ಕುಮಾರ್ ಭಾಗವಹಿಸಿದ್ದರು.

ಸಂಶೋಧನೆ ಸಹಯೋಗದ ವ್ಯಾಪ್ತಿಯನ್ನು ವಿಸ್ತರಿಸುವ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಯಿತು. ವಿಶೇಷವಾಗಿ ವಿತರಣಾ ಕೊಳವೆ ಮಾರ್ಗಗಳ ಸುರಕ್ಷತೆ ಮತ್ತು ವ್ಯವಸ್ಥೆಯ ಮೇಲ್ವಿಚಾರಣೆಯ ಯಾಂತ್ರೀಕರಣ ಹಾಗೂ ಎನ್‌ಐಟಿಕೆ ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಮತ್ತು ಉದ್ಯೋಗ ಸಾಧ್ಯತೆ ಬಗ್ಗೆಯೂ ಚರ್ಚಿಸಲಾಯಿತು ಎಂದು ಎನ್‌ಐಟಿಕೆ ಪ್ರಕಟಣೆ ತಿಳಿಸಿದೆ.

Prajavani, Date:17/05/2024 P,No 02